



## ಕಾಮಿಡಿ ಮಿಂಚು

ಕಾಮಿಡಿ ಕಿಲಾಡಿಗಳಲ್ಲಿ ಒಬ್ಬರು ಕಬಾಲಿ ಪಾತ್ರದಲ್ಲಿ (11.12.16) ಮಿಂಚಿದರು. ಚಿತ್ರನಟರ ವೇಷ ಭೂಷಣಗಳನ್ನು ಅನುಸರಿಸುವುದು ಇದ್ದೇ ಇದೆ. ಅಣ್ಣಾವ್ರ ತ್ರಿಮೂರ್ತಿ ಚಿತ್ರದ ಹಿಪ್ಪಿ ವೇಷವನ್ನು ಹಾಕಿದ್ದೂ ಇದೆ. ಉಪೇಂದ್ರರ ಗೆಟ್ ಅಪ್ ಅಂತೂ ಜನಪ್ರಿಯ. ಮಹಾನದಿಯಲ್ಲಿ ಅರ್ಚಕರ ಪಾತ್ರ ಹೇಳಿ ಮಾಡಿಸಿದಂತಿದೆ. ಕಥೆ ಹೇಗೇ ಇದ್ದರೂ ಪಾತ್ರಗಳ ಆಯ್ಕೆ ಸಮರ್ಪಕವಾಗಿದೆ. ಶ್ರೀಮಾನ್ ಶ್ರೀಮತಿಯಲ್ಲಿ ಕೂಲಿಂಗ್ ಗ್ಲಾಸ್ ಊರಗೌಡ ಮಧುರಾ ಮೇಡಮ್‌ರ ಮೈಮಾಟಕ್ಕೆ ಮನಸೋತು ಮಿಂಚಿದ್ದಾರೆ. ಕಡೇದಾಗಿ ಕಾಮಿಡಿಗಳಲ್ಲಿ ಸಬ್‌ರಿಜಿಸ್ಟ್ರಾರ್ ಪಾತ್ರ ವಹಿಸಿದವರಲ್ಲಿ ಕರಿಬಸವಯ್ಯನ ಚಹರೆ ಕಂಡುಬರುತ್ತದೆ.

—ಎಸ್.ಎಸ್. ಮಹಾಬಲ ರಾವ್, ನರಸಿಂಹರಾಜಪುರ

## ಬೋರ್ ಬಾಸ್

ಇತ್ತೀಚೆಗೆ ಟಿವಿ ಧಾರಾವಾಹಿಗಳು, ರಿಯಾಲಿಟಿ ಶೋಗಳು ವೀಕ್ಷಕರ ಮನಸ್ಸನ್ನು ರಂಜಿಸಿ, ಬದುಕಿಗೆ ಮಾರ್ಗದರ್ಶಕವಾಗುವಂತಹ ವಿಚಾರಗಳನ್ನು ತಿಳಿಸುವುದು ಹೋಗಲಿ, ಮನಸ್ಸಿಗೆ ಒಂದು ರೀತಿಯ ಕಿರಿಕಿರಿ ಉಂಟು ಮಾಡುತ್ತವೆ. ಚಂದದ ಸಂಸಾರದಲ್ಲಿ ಒಬ್ಬ ಖಳನಾಯಕ ಮನೆ ಸೇರಿಕೊಂಡಿರುವುದು, ನಾಯಕಿಯರನ್ನು ಉದ್ದಕ್ಕೂ ಹಿಂಸೆಗೆ ಒಳಪಡಿಸಿ ಕಣ್ಣೀರು ಸುರಿಸುವುದು, ಗಂಡನನ್ನು ನಾನು, ತಾನು ಎಂದು ಧಿಕ್ಕರಿಸಿ ಮಾತನಾಡುವುದು, ಚಿಕ್ಕಮಕ್ಕಳ ಮನಸ್ಸಲ್ಲಿ ದೆವ್ವ, ಭೂತಗಳ ಕೆಟ್ಟ ಭಾವನೆಗಳನ್ನು ತುಂಬಿಸುವುದು... ಇದೆಲ್ಲಾ ಬೇಕಾ? ಬಿಗ್‌ಬಾಸ್ ಅಂತೂ 'ಬೋರ್–ಬಾಸ್' ಆಗುತ್ತಿದೆ. ಟಿ.ಆರ್.ಪಿ. ಒಂದನ್ನೇ ಗಣನೆ ತೆಗೆದುಕೊಳ್ಳದೆ ಸಮಾಜದ ಸ್ವಾಸ್ಥ್ಯವನ್ನು ಉಳಿಸುವಂತಹ ವಿಚಾರ, ದೃಶ್ಯಗಳನ್ನು ಹೆಚ್ಚಾಗಿ ಅಳವಡಿಸಿಕೊಳ್ಳುವುದು ನಿರ್ಮಾಪಕರ, ನಿರ್ದೇಶಕರ ಕರ್ತವ್ಯವಾಗಲಿ.

ಮ.ಗೋ. ಸುಬ್ಬಣ್ಣ, ಮೇಗರವಳ್ಳಿ

## ಸಂಬಂಧವಿಲ್ಲದ ಸಂಸಾರ

'ಈ ದಶಮಾನದ ಎರಡು ಘೋರ ದುರಂತಗಳೆಂದರೆ... 1. ಪುಟ್ಟ ಗೌರಿ ಮದುವೆ; 2. ಲಕ್ಷ್ಮೀ ಬಾರಮ್ಮ ಎಂಬ ಕಲರ್ಸ್ ಕನ್ನಡ ವಾಹಿನಿಯ ಧಾರಾವಾಹಿಗಳು' ಎಂಬ ಜೋಕೊಂದು ವಾಟ್ಸಾಪ್‌ನಲ್ಲಿ ಹರಿದಾಡಿತ್ತು. ಇದೀಗ ಇದು ಜೋಕಲ್ಲ ವಾಸ್ತವ ಎಂದೇ ಹೇಳಬೇಕಾಗಿದೆ. ಕಥೆಯ ಆರಂಭಕ್ಕೂ, ಈಗಿರುವ ಹಂತಕ್ಕೂ ಯಾವುದೇ ಸಂಬಂಧವಿಲ್ಲ. ಸಂದೇಶವಿರದಿದ್ದರೂ ಪರವಾಗಿಲ್ಲ, ಮನರಂಜನೆ ಒತ್ತಟ್ಟಿಗಿರಲಿ, ಕೊನೇಪಕ್ಷ ಜನರ ಮನಸ್ಸಿನಲ್ಲಿ ದ್ವೇಷ, ಸೇಡು, ಅಸೂಯೆ, ಮೂಢನಂಬಿಕೆ ಅಹಂಕಾರಗಳನ್ನು ದಯವಿಟ್ಟು ಬಿತ್ತಬೇಡಿ. ಕಥೆಗಳನ್ನು ತಕ್ಷಣ ಮುಗಿಸಿ ಪುಣ್ಯ ಕಟ್ಟಿಕೊಳ್ಳಿ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

ವಾರದ ಪತ್ರ

## ಮಕ್ಕಳ ಚಾನೆಲ್‌ಗಳು

ಧಾರಾವಾಹಿಗಳಲ್ಲಿ ಕ್ರೌರ್ಯ, ಮತ್ಸರ, ಕೊಲೆ, ಮೋಸ ಇವುಗಳೇ ತುಂಬಿವೆ. ಮಕ್ಕಳು ಈ ಧಾರಾವಾಹಿಗಳನ್ನು ನೋಡಿ ರಾತ್ರಿ ಮಲಗಿದಾಗ ಬೆಚ್ಚಿಬೀಳುತ್ತಾರೆ. ಈ ಧಾರಾವಾಹಿಗಳನ್ನು ನೋಡುವ ಬದಲು, ಮಕ್ಕಳು ವಿಜ್ಞಾನ ಸಂಬಂಧಿ ಟಿವಿ ನೋಡಬಹುದು. ಇವುಗಳಲ್ಲಿ ನಾವೆಂದೂ ನೋಡದ ಹಾಗೂ ಅಲ್ಲಿಗೆ ನಾವು ಹೋಗಲಾರದಂತಹ ಸ್ಥಳಗಳನ್ನು ತೋರಿಸುತ್ತಾರೆ. ನಮ್ಮನ್ನು ಸಾಗರದ ಆಳದವರೆಗೆ ಕೊಂಡೊಯ್ದು ನಾವು ನೋಡಿರಲಾರದಂತಹ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳನ್ನು ತೋರಿಸುತ್ತಾರೆ. ಡಿಸ್ಕವರಿ ಸೈನ್ಸ್ ವಾಹಿನಿಯಲ್ಲಿ ಪ್ರಸ್ತುತ ವಿಜ್ಞಾನದ ಬಗ್ಗೆ ತಿಳಿಸುತ್ತಾರೆ ಹಾಗೂ ಹೌ ಇಟ್ ಈಸ ಮೇಡ್ ವಾಹಿನಿಯಲ್ಲಿ ತರತರಹದ ವಸ್ತುಗಳನ್ನು ತಯಾರಿಸುವ ವಿಧಾನಗಳನ್ನು ತೋರಿಸುತ್ತಾರೆ. ಕಾರ್ಟೂನ್ ನೆಟ್ವರ್ಕ್ ವಾಹಿನಿಗಳಲ್ಲಿ ಮಕ್ಕಳೊಂದಿಗೆ ನಾವೂ ಸಹ ಸಂತೋಷ ಪಡುವಂತಹ ಕಥೆಗಳನ್ನು ತೋರಿಸುತ್ತಾರೆ.

ಈ ವಾಹಿನಿಗಳು ಬೇಜಾರಾದರೆ, ಮಕ್ಕಳೊಂದಿಗೆ ಹತ್ತಿರ ಇರುವ ಆಟದ ಮೈದಾನಕ್ಕೆ ಹೋಗಬಹುದು. ಅಲ್ಲಿ ಮಕ್ಕಳು ಆಟ ಆಡುವಾಗ ನೀವುಗಳು ವ್ಯಾಯಾಮ ಮಾಡಬಹುದು. ಈಗ ಎಲ್ಲ ಆಟದ ಮೈದಾನದಲ್ಲಿ ವಿಶಿಷ್ಟವಾದಂತಹ ವ್ಯಾಯಾಮ ಸಲಕರಣೆಗಳನ್ನು ಅಳವಡಿಸಿದ್ದಾರೆ. ಧಾರಾವಾಹಿಗಳಿಂದ ಕಲಿಯುವ ಒಳ್ಳೆಯ ವಿಷಯ ಯಾವುದೂ ಇಲ್ಲ ಎನಿಸುತ್ತದೆ. ಈ ಧಾರಾವಾಹಿಗಳಿಂದ ಮಕ್ಕಳ ಮನಸ್ಸಿಗೆ ಹಾನಿಯಾಗುತ್ತದೆಯೇ ವಿನಃ ಯಾವ ಪ್ರಯೋಜನವೂ ಇಲ್ಲ. ಮೊದಲು ಧಾರಾವಾಹಿಗಳ ಬಗ್ಗೆ ವಿಮರ್ಶೆ ಮಾಡುವುದನ್ನು ನಿಲ್ಲಿಸಿ. ಆಗಲಾದರೂ ಈ ಧಾರಾವಾಹಿಗಳು ಮೊಟಕುಗೊಳ್ಳುತ್ತವೆಂದು ನೋಡೋಣ.

ರಾಮಕೃಷ್ಣ, ಬೆಂಗಳೂರು

## ನೈತಿಕ ಬದ್ಧತೆ ಎಲ್ಲಿದೆ?

ಮಂತ್ರಿಯೊಬ್ಬರ ಲೈಂಗಿಕ ಹಗರಣಕ್ಕೆ ಸಂಬಂಧಿಸಿದಂತೆ ಕೆಲವು ನ್ಯೂಸ್ ಚಾನೆಲ್‌ಗಳ ವೈಖರಿ ಪ್ರಜ್ಞಾವಂತ ಮತ್ತು ಜನಸಾಮಾನ್ಯ ವೀಕ್ಷಕರು ತಲೆ ತಗ್ಗಿಸುವಂತೆ ಮಾಡಿದೆ. ಇಂತಹ ಸೂಕ್ಷ್ಮ ವಿಷಯವನ್ನು ಪ್ರಸಾರ ಮಾಡುವಾಗ, ಬಳಸಬೇಕಾದ ಶಬ್ದಗಳು ಮತ್ತು ತೋರಿಸಬೇಕಾದ ದೃಶ್ಯಾವಳಿಗಳು ಲಂಗು ಲಗಾಮವಿಲ್ಲದೆ, ಸೆನ್ಸಾರ್ ಅಗದೆ ಅನಾವರಣಗೊಂಡವು. ಚಾನೆಲ್‌ಗಳು ತಮ್ಮ ಟಿಆರ್‌ಪಿ ಸಲುವಾಗಿ ಸುದ್ದಿಯನ್ನು ವೈಭವೀಕರಿಸುವ ಆತುರದಲ್ಲಿ ಸುದ್ದಿ ಪ್ರಸಾರದಲ್ಲಿ ಮತ್ತು ಸುದ್ದಿಯ ಶೀರ್ಷಿಕೆಯಲ್ಲಿ ಬಳಸಿದ ಪದಪುಂಜಗಳು ಮತ್ತು ಸುದ್ದಿಯ ಹಿನ್ನೆಲೆಯಲ್ಲಿ ಉಪಯೋಗಿಸಿಕೊಂಡ ಕ್ಲಿಪಿಂಗ್ಸ್ ವೀಕ್ಷಕರಿಗೆ ಮುಜುಗರ ಉಂಟು ಮಾಡಿದವು. ಶೀರ್ಷಿಕೆಯಲ್ಲಿ ಮತ್ತು ಸುದ್ದಿಯಲ್ಲಿ ಮೆರೆದಾಡಿದ 'ಕಾಮದಾಟ, ಶೃಂಗಾರಲೀಲೆ, ಪಲ್ಲಂಗ ಪುರಾಣ'ದಂತಹ ಶಬ್ದಗಳು ಮನೆಮಂದಿ ಎಲ್ಲಾ ಕುಳಿತು ನ್ಯೂಸ್ ನೋಡುವಾಗ ಹಿಂಸಿಸುತ್ತಿದ್ದವು. ಒಂದೆರಡು ವಾಹಿನಿಗಳು ನೈತಿಕತೆಯ ಚೌಕಟ್ಟಿನಲ್ಲಿ ಸ್ವಯಂ ನಿಯಂತ್ರಣ ಹೇರಿಕೊಂಡರೂ ಬಹುತೇಕ ವಾಹಿನಿಗಳ 'ತಾನೇ ಮೊದಲು ಮತ್ತು ತಾನೊಬ್ಬನೇ' ಅಬ್ಬರದಲ್ಲಿ, 'ಸ್ವಯಂ ನಿಯಂತ್ರಣ' ಅಲ್ಲೋಹಾಲ್ ಮುಂದೆ ಹಾಲಿನ ಪರಿಸ್ಥಿತಿಯಂತಿತ್ತು.

ರಮಾನಂದ ಶರ್ಮಾ, ಶಾಂತ ಗೌಡ, ಬೆಂಗಳೂರು

## ಭ್ರೂಣ ಹತ್ಯೆಯ ಅಟ್ಟಹಾಸ

ಕಲರ್ಸ್ ಕನ್ನಡದ ಲಕ್ಷ್ಮೀಬಾರಮ್ಮ, ಕುಲವಧು, ಪುಟ್ಟಗೌರಿ ಮದುವೆ ಧಾರಾವಾಹಿಗಳಲ್ಲಿ ಗರ್ಭಿಣಿಯರ ಭ್ರೂಣ ಸಾಯಿಸಲು ಏನೆಲ್ಲಾ ಮಾಡುತ್ತಾರೆ. ಲಕ್ಷ್ಮೀ ಬಾರಮ್ಮದಲ್ಲಿ ಗೊಂಬೆಯ ಬಸಿರನ್ನು ನಾಶ ಮಾಡಲು ಕುಮುದಾ, ಆಕೆ ಗಂಡ ಕುತಂತ್ರ ಮಾಡುತ್ತಾರೆ. ಮಾಂತ್ರಿಕ ಸಹ ಭ್ರೂಣವನ್ನೇ ತನ್ನ ಪೂಜೆಗೆ ಮುಖ್ಯ ಗುರಿಯಾಗಿಸಿಕೊಂಡಿರುವುದು, ಕುಲವಧು ಧಾರಾವಾಹಿಯಲ್ಲಿ ವಚನ ಗರ್ಭಿಣಿ ಎಂದು ತಿಳಿದು ನಿಕಿಲ್ ಹೇಳುವುದು 'ಗೌರವ್ ಮಗುವನ್ನು ವಚನಳ ಹೊಟ್ಟೆಯಲ್ಲಿ ಬೆಳೆಯಲು ನಾನು ಬಿಡುವುದಿಲ್ಲ' ಎಂದು. ಇನ್ನು 'ಪುಟ್ಟಗೌರಿ ಮದುವೆ' ಧಾರಾವಾಹಿಯಲ್ಲಿ ಧರ್ಮಾ 'ನಾವು ಕೊಟ್ಟ ಔಷಧಿ ಹೊಟ್ಟೆ ಒಳಗೆ ಹೋದ ತಕ್ಷಣ ಒಳಗೆ ವಿಲವಿಲ' ಅಂತ ಅಟ್ಟಹಾಸದಿಂದ ನಗುತ್ತಾನೆ. ಏಕೆ ಹೀಗೆ? ಕರುಳ ಕುಡಿ ಚಿಗುರೊಡೆಯುವ ಮುನ್ನವೇ ಆ ಪುಟ್ಟ ಜೀವ ಸಂಹಾರಕ್ಕಾಗಿ ಏನೆಲ್ಲಾ ದೊಡ್ಡ ದೊಡ್ಡ ಕುತಂತ್ರ. ಈ ರೀತಿಯ ದೃಶ್ಯಗಳು ಮಹಿಳಾ ವೀಕ್ಷಕರಲ್ಲಿ ಅತೀವ ನೋವು, ಸಂಕಟ ಕೊಡುತ್ತವೆ. ಈ ದೃಶ್ಯಗಳು ಸಮಾಜಕ್ಕೆ ಮಾರಕವಲ್ಲವೆ? ಮಹಿಳೆಯರನ್ನು ಯಾಕೆ ಈ ರೀತಿ ಹಿಂಸಿಸುತ್ತಿದ್ದಾರೆ. ದಯವಿಟ್ಟು ಇಂತಹ ಕ್ರೂರ ಕೃತ್ಯಗಳ ದೃಶ್ಯಗಳನ್ನು ನಿಲ್ಲಿಸಿ.

ವಿಜಯಲಕ್ಷ್ಮಿ, ಬೆಂಗಳೂರು

## ದೂರವಾಣಿ ಸಂಖ್ಯೆ ಸರಿ ಇಲ್ಲ

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುತ್ತಿರುವ 'ಪಾಕಶಾಲೆ' ಕಾರ್ಯಕ್ರಮದ ಕೊನೆಯಲ್ಲಿ ನಿರೂಪಕಿಯರಾದ ಸುಜಾತ ಮತ್ತು ಸಿಂಚನ್ ವೀಕ್ಷಕರಿಗೆ ಒಂದು ದೂರವಾಣಿ ಸಂಖ್ಯೆಯನ್ನು ಕೊಡುತ್ತಿದ್ದಾರೆ. ಅದಕ್ಕೆ ಯಾವಾಗ ಕರೆ ಮಾಡಿದರೂ ಸ್ವಿಚ್ ಆಫ್ ಎಂದು ಬರುತ್ತದೆ. ಸರಿಯಾದ ದೂರವಾಣಿ ಸಂಖ್ಯೆಯನ್ನು ಕೊಟ್ಟರೆ ವೀಕ್ಷಕರಿಗೆ ಅನುಕೂಲವಾಗುತ್ತದೆ.

ಸುಭದ್ರ ಮೂರ್ತಿ, ಬೆಂಗಳೂರು